## ಕವಿತೆ




**ಕೆ. ಷರೀಫಾ**

ಕಲೆ: ವಿಶ್ವನಾಥ್ ಎ.ಎಸ್.


# ಕಾಯಪ್ರಜ್ಞೆ

ಹೆಣ್ಣುತನದ ಹೊಸ ಆವಿಷ್ಕಾರ
ದೇಹ ಮನಸುಗಳೊಳಗೆ ನುಸುಳಿ
ನಡುವೆ ಸುಳಿ ಸುಳಿದಾಡುವಾತ್ಮ
ರೂಢಿಗಳ ಕವಚದ ಚಾದರದೊಳಗಿನ
ಒಂದೊಂದೇ ನಂಬಿಕೆಗಳ ಭೇದಿಸುತ್ತಾ
ದೇಹಕ್ಕೆ ಮೂಡಿದ ಅರಿವಿನ ವಿಸ್ತಾರ
ಸ್ವಚ್ಛಂದ ಸ್ವಾತಂತ್ರ್ಯಗಳ ಅರ್ಥ ವ್ಯಾಪ್ತಿ
ಉಳಿದ ಪ್ರಶ್ನೆಗಳ ಸುರುಳಿ ಸುತ್ತಿಟ್ಟು
ಅಂತರಂಗದ ಅಂಗಳಕ್ಕೆ ಲಗ್ಗೆಯಿಟ್ಟು
ಒಂದೊಂದೇ ಪ್ರಶ್ನೆ ಹಾಕಿಕೊಂಡೆ,
ಹೃದಯದ ವ್ರಣ ಅನಾವರಣಗೊಳಿಸಿ
ಭಾವನಾತ್ಮಕ ಆಯುಧಗಳಿಂದ ಕೆದಕಿ
ಅವನದೇ ಗಂಡಾಳಿಕೆಯ ಪರಿಭಾಷೆ ಹೆಕ್ಕಿ
ಕಾಯಕ್ಕೆ ಮೆತ್ತಿದ್ದ ಮೈಲಿಗೆಯ ಕಿತ್ತೆಸೆದು
ಪಾವಿತ್ರ್ಯ ಪಾತಿವ್ರತ್ಯದ ಪಡಿಯಚ್ಚು
ಮುರಿದು ನುಚ್ಚು ನೂರಾಗಿಸುವ ಪಟ್ಟು
ಭೋಗಕ್ಕೂ, ಬಳಕೆಗೂ, ಮಡಿವಂತಿಕೆಗೂ
ಶತಮಾನಗಳಿಂದ ಬಳಕೆಯಾಗುತ್ತಲೇ ಇರುವೆ
ಅವಳ ದೇಹದಿಂದ ನನ್ನ ದೇಹಕ್ಕೆ ದಾಟಿಸುತ್ತ
ದ್ವಂದ್ವಗಳ ಮಧ್ಯೆ ನರಳುವ ಆತ್ಮಗಳ ನೇತು
ತಲ್ಲಣಗಳ ಸರಳರೇಖೆಯಲಿ ಸುಳಿದಾಡಿದ
ವಿಕೃತಿಯ ಒಳತೋಟಿಗಳ ಅಳೆದಳೆದು
ಅವನ ಅಹಮ್ಮಿನ ಸಿಂಹಪಾಲು ಧಿಕ್ಕರಿಸಿ
ಬಲಿಪಾಶದ ಬಲೆಯೊಳಗೆ ಸಿಲುಕಿದ್ದ
ಧರ್ಮದ ಹೊಸ್ತಿಲು ದಾಟುವ ತವಕ
ನನ್ನದೇ ಹೊರಳುದಾರಿಯಲ್ಲಿ ನಿಂತು
ಗಂಡಾಳಿಕೆಯನ್ನೇ ಪ್ರಶ್ನಿಸುವ ತುಡಿತ.
ಮೋಸದ ಮಾತಿಗೆ ಮರುಳಾಗಿ
ಹಗಲಿರುಳು ಗರತಿ ಪಟ್ಟಕೆ ಹಂಬಲಿಸಿ
ಹೆಣ್ಣು ದೇವತೆಯ ಪಟ್ಟ ಕಟ್ಟಿದ್ದು ಸಾಕು
ಸಂಸ್ಕೃತಿಯ ವಕ್ತಾರಿಕೆ ವಹಿಸುವುದು ಬಿಟ್ಟಿರುವೆ
ಇಗೋ ತೆಗೆದುಕೋ ಕಿತ್ತೆಸೆದು ಹೊರಟಿರುವೆ
ನೀನು ಹೊರಿಸಿದ ಎಲ್ಲ ಆಭರಣ ದಾಗೀನ
ನಿನ್ನ ಮನೆ, ಮನೆತನ, ಸಂಸ್ಕೃತಿಯ ವಾರ್ತೆ
ವಕ್ತಾರಿಕೆ, ಯಾಜಮಾನಿಕೆ ನಿನಗೇ ಇರಲಿ
ನನ್ನ ದೇಹ, ಕಾಯ, ಮನಸು ನನ್ನದಲ್ಲವಾದರೆ
ನಿನ್ನ ಮನೆ, ಮನೆತನ, ಮಕ್ಕಳು, ಆಸ್ತಿ
ಎಲ್ಲವೂ ನಿನ್ನದೇ ಅಲ್ಲಿ ನನ್ನದೇನಿದೆ?
ನಿನ್ನ ವಂಶವಾಹಿನಿ ನೀನೇ ನಡೆಸಿಕೋ
ಅಲ್ಲಿ ನಾನಿಲ್ಲದಿದ್ದರೆ?

